## ಅವಹೇಳನ ಮಾಡುವುದು ಮನರಂಜನೆಯೆ?

ಇತ್ತೀಚೆಗೆ ಕನ್ನಡ ಧಾರಾವಾಹಿಗಳಲ್ಲಿ ಮಧ್ಯಮವರ್ಗ ಮತ್ತು ಬಡವರನ್ನು ಹೀಯಾಳಿಸುವ ಮಾತುಗಳು ಹೆಚ್ಚುತ್ತಿವೆ. ಮಧ್ಯಮ ಮತ್ತು ಬಡವರ್ಗದವರನ್ನು ಅವಮಾನಿಸುವ ಉಳ್ಳವರ ದರ್ಪವನ್ನು ನಿರಂತರ ಜಾಹೀರುಪಡಿಸಲಾಗುತ್ತಿದೆ. ಇಂತಹ ಸಂವೇದನಾರಹಿತ ಕಾರ್ಯಕ್ರಮಗಳು ಯಾವ ತರಹದ ಮನೋರಂಜನೆಯನ್ನು ನೀಡುತ್ತವೆ?

ಒಂದು ವರ್ಗವನ್ನು ಅವಹೇಳನ ಮಾಡುವುದು ಅಪರಾಧ. ಯಾರನ್ನೂ ಯಾವ ಕಾರಣಕ್ಕೂ ತುಚ್ಛೀಕರಿಸುವ ಅಧಿಕಾರ ಯಾರಿಗೂ ಇಲ್ಲ. ಜಾತಿ ನಿಂದನೆಯಂತೆ ವರ್ಗ, ಬಣ್ಣ, ಆಕಾರ, ಜನಾಂಗ ಮತ್ತು ಲಿಂಗಾಧಾರಿತ ನಿಂದನೆಗಳೂ ಶಿಕ್ಷಾರ್ಹ ಆಗಬೇಕು.

—ಮಧುಸೂದನ್ ಬಿ.ಎಸ್., ಬೆಂಗಳೂರು

## ಪಾತ್ರದ ಮೂಲ ಮರೆತರೆ ಹೇಗೆ?

ಟೀವಿ ಧಾರಾವಾಹಿಯ ಕಥೆಗೂ ಮತ್ತು ಪಾತ್ರಗಳ ವಿಶೇಷಣಗಳಿಗೂ ಯಾವ ಸಂಬಂಧವೂ ಇರುವುದಿಲ್ಲ. ಸಿರಿ ಕನ್ನಡದ 'ಬ್ರಾಹ್ಮಿನ್ಸ್ ಕೆಫೆ'ಯಲ್ಲಿ ಕೆಫೆ ಎಲ್ಲಿದೆ? ಅದರ ಸ್ವರೂಪ ಏನು ಅನ್ನುವುದನ್ನೂ ಹೇಳಿಲ್ಲ. ಝೀ ಕನ್ನಡದ 'ನಮ್ಮ ಲಚ್ಚಿ'ಯಲ್ಲಿ ಸೆಲೆಬ್ರಿಟಿ ಸಂಗೀತಗಾರ ಎಂದೇ ಖ್ಯಾತಿಗಳಿಸಿರುವ ಸಂಗಂ ಒಂದು ದಿನವೂ ಸಂಗೀತ ಕಛೇರಿ ನಡೆಸಿದ್ದನ್ನು ಕಾಣಲಿಲ್ಲ. ಕಲರ್ಸ್ ಕನ್ನಡದ 'ಲಕ್ಷ್ಮಿ ಬಾರಮ್ಮ'ದಲ್ಲಿ ಸಂಗೀತಗಾರ ಎನಿಸಿಕೊಂಡಿರುವ ವೈಷ್ಣವ್ ಇದುವರೆಗೆ ಎಲ್ಲೂ ಹಾಡಿದಂತಿಲ್ಲ. ತಮ್ಮ ಸಂಸಾರದ ಜಂಜಾಟದಲ್ಲಿ ಪಾತ್ರದ ಮೂಲವನ್ನೇ ಮರೆತಿದ್ದಾರೆ.

—ವಿ. ಶರ್ಮಿಷ್ಟ, ಬೆಂಗಳೂರು

## ಮುಟ್ಟನ್ನು ಕಾಯಿಲೆಯಂತೆ ಬಿಂಬಿಸುವುದು ಸರಿಯಲ್ಲ

ಝೀ ಕನ್ನಡದ 'ಭೂಮಿಗೆ ಬಂದ ಭಗವಂತ'ದಲ್ಲಿ ಮುಟ್ಟಿನ ಸಂಗತಿಯನ್ನು ಯಾವುದೋ ಕಾಯಿಲೆ ಎಂಬಂತೆ ಬಿಂಬಿಸಲಾಯಿತು. ಇದು ಅತ್ಯಂತ ಮುಜುಗರವನ್ನು ಉಂಟುಮಾಡಿತು. ಮನೆಯ ಹೆಣ್ಣುಮಕ್ಕಳಿಗೆ ತಿಂಗಳಿಗೆ ಮೂರು ದಿನ ವಿರಾಮ ಕೊಡುವ ಉದ್ದೇಶದಿಂದ ನಮ್ಮ ಹಿರಿಯರು ಈ ಪದ್ಧತಿಯನ್ನು ರೂಢಿಯಲ್ಲಿ ಇಟ್ಟಿದ್ದರು. ಹೆಣ್ಣುಮಕ್ಕಳು ಹೊರಗಡೆ ದುಡಿಯಲು ಆರಂಭಿಸಿದ ನಂತರ ಈ ಪದ್ಧತಿಗೆ ತಿಲಾಂಜಲಿ ಕೊಟ್ಟು ಬಹಳ ಕಾಲವೇ ಆಗಿದೆ. ಆದರೂ, ಮುಟ್ಟನ್ನು ಕಾಯಿಲೆಯಂತೆ ಬಿಂಬಿಸುವುದು ಸರಿಯಲ್ಲ.

—ವಾ. ಮುರಳೀಧರ, ತೀರ್ಥಹಳ್ಳಿ

'ಭೂಮಿಗೆ ಬಂದ ಭಗವಂತ'ದಲ್ಲಿ ಹಲವು ವಿಚಾರಪೂರ್ಣ ಸಂಗತಿಗಳನ್ನು ಅನಾವರಣ ಮಾಡುತ್ತಾರೆ. ಈಚೆಗೆ ಮುಟ್ಟಿನ ಯಾತನೆ ಅನುಭವಿಸುವವರ ನೋವಿಗೆ ಮಿಡಿದಿದ್ದಾರೆ. ಆ ಸಂಗತಿಯನ್ನು ಮುಜುಗರ ಉಂಟಾಗದ ರೀತಿಯಲ್ಲಿ ಚಿತ್ರಿಸಿದ್ದು ಮೆಚ್ಚಲೇಬೇಕು. ಮೂರು ದಿನ ಕೆಲಸ ಮಾಡದೆ ಆರೈಕೆ ಮಾಡಬೇಕು ಎಂಬ ಸಂದೇಶ ರವಾನೆ ಮಾಡಿದ್ದಾರೆ. ತಾಯಿ, ಅತ್ತೆ, ಸೊಸೆ, ಮಗಳು, ನಾದಿನಿ, ಓರಗಿತ್ತಿ ಆಗಿರುವ ಆಕೆಯ ಆರೈಕೆ ಗಂಡಸರ ಜವಾಬ್ದಾರಿ ಕೂಡ. ತಂತ್ರಜ್ಞಾನ ವಿಜ್ಞಾನದಲ್ಲಿ ಹೇಗಿರಬೇಕು ಎಂಬ ಸಂದೇಶವನ್ನು ಇದು ನೀಡಿದೆ.

—ರಾಜೇಂದ್ರ ಹೆಗಡೆ, ಹಾವೇರಿ

## ಮೃಗೀಯ ವರ್ತನೆ ಕಾರ್ಯಕ್ರಮಕ್ಕೆ ಶೋಭಿಸದು

ಹುಲಿ ಉಗುರಿನ ಪೆಂಡೆಂಟ್ ಧರಿಸಿದ್ದ ವರ್ತೂರು ಸಂತೋಷ್ ಎಂಬ ಸ್ಪರ್ಧಿ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಪ್ರಕರಣವನ್ನು ಎದುರಿಸಿ ಮರಳಿ 'ಬಿಗ್ ಬಾಸ್' ಮನೆಗೆ ಬಂದಿದ್ದಾರೆ. ವಿಪರ್ಯಾಸವೆಂದರೆ, ಆ ಮನೆಯ ಸ್ಪರ್ಧಿಗಳಲ್ಲಿ ಕೆಲವರು ಮೃಗೀಯವಾಗಿ ವರ್ತಿಸುತ್ತಿದ್ದಾರೆ. ಒಬ್ಬಿಬ್ಬರಂತೂ ರೌಡಿಗಳೇ ಸರಿ! ಹೊಡೆಯುವ ಬಡಿಯುವ ಮಾತು ಆಗಾಗ ಅಲ್ಲಿ ಕೇಳಿಬಂದಿದೆ.

—ಪಿ.ಜೆ. ರಾಘವೇಂದ್ರ, ಮೈಸೂರು

ಕಲರ್ಸ್ ಕನ್ನಡದ 'ಬಿಗ್ ಬಾಸ್'ನಲ್ಲಿ ಈ ಬಾರಿಯಂತೂ ಬಹುಪಾಲು ಸ್ಪರ್ಧಿಗಳದು ಅನಾಗರಿಕ ವರ್ತನೆ. ಅವರು ಬಳಸುವ ಭಾಷೆ, ಹಾವಭಾವ ಎಲ್ಲ ನೋಡುಗರಿಗೆ ಮಾನಸಿಕ ಹಿಂಸೆ ಅನ್ನಿಸುತ್ತದೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

ಕಲರ್ಸ್ ಕನ್ನಡದ 'ಬಿಗ್ ಬಾಸ್' ಹಿಂದಿನ ಒಂಬತ್ತು ಸಂಚಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ 10ನೇ ಆವೃತ್ತಿ ತುಂಬ ಬಾಲಿಶ ಅನ್ನಿಸುತ್ತದೆ. ಸ್ಪರ್ಧಿಗಳ ಮಾತು, ನಡವಳಿಕೆ, ಆಟ, ಸ್ಪರ್ಧೆ ಯಾವುದೂ ಉತ್ತಮವಾಗಿಲ್ಲ.

ಕೋಪ, ತಾಪ ಹೆಚ್ಚಿದೆ. ಸೈಕೊ ಅನ್ನೋದು ಈ ಕಾರ್ಯಕ್ರಮಕ್ಕೆ ಶೋಭೆ ತರುವಂಥದ್ದಲ್ಲ. ಇದು ಪ್ರತಿಭೆಯನ್ನು ಹೊರ ತರುವುದಕ್ಕೆ ಎನ್ನುತ್ತಾರೆ. ನಾಟಕೀಯ ಬೆಳವಣಿಗೆ ಹೆಚ್ಚಾಗಿ ಕಾಣುತ್ತಿದೆ. 'ವಾರದ ಕಥೆ ಕಿಚ್ಚನ ಜೊತೆ'ಯಲ್ಲಿ ಎಷ್ಟೇ ನೀತಿ ಹೇಳಿದರೂ ಅದನ್ನು ತಿದ್ದಿಕೊಳ್ಳದೆ, ಅವನ್ನೆಲ್ಲಾ ಮೀರುವ ಮನೋಭಾವ ಸ್ಪರ್ಧಿಗಳಲ್ಲಿ ಹೆಚ್ಚುತ್ತಿದೆ. ಈ ಉದ್ಧಟ ನಡವಳಿಕೆ ಅಹಿತಕರ ಸನ್ನಿವೇಶಕ್ಕೆ ದಾರಿಯಾಗದಂತೆ ಇರಲಿ ಎಂಬ ಆಶಯದಿಂದ.

—ಕಾಳಿಹುಂಡಿ ಶಿವಕುಮಾರ್, ಮೈಸೂರು

ವಾರದ ಪತ್ರ

## ಗುಡಿ ಕೈಗಾರಿಕೆಗೆ ಬೆಳಕಾಗಲಿ



ಝೀ ಕನ್ನಡದ 'ಜೋಡಿ ನಂ 1' ಜೋಡಿ ಉತ್ಸವ ಶೋನಲ್ಲಿ ಸೆಲೆಬ್ರಿಟಿಗಳು ತಮ್ಮ ಜೋಡಿ ಜೊತೆ ತಮ್ಮ ಜೀವನದ ಅನುಭವವನ್ನು ಹಂಚಿಕೊಳ್ಳುತ್ತಿದ್ದಾರೆ. ಅನೇಕರಿಗೆ ಇದು ಪಾಠವಾಗಬಹುದು. ಅನೇಕ ಸ್ಪರ್ಧೆಗಳಲ್ಲಿ ಜೋಡಿಗಳು ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ. ಅದರಲ್ಲಿ ಹಣತೆ ತಯಾರಿಸಿದರು. ನಂತರ ಮಡಿಕೆಗಳ ಆಟದ ಸ್ಪರ್ಧೆಗಳನ್ನು ಇಟ್ಟಿದ್ದರು. ಈ ರೀತಿ ಬೇರೆ ಬೇರೆ ಕರಕುಶಲ ಕಲೆಗಳನ್ನು ಪರಿಚಯಿಸಬಹುದು. ದೀಪ ಬೆಳಗಿಸಲು ಹಣತೆಯನ್ನು ಖರೀದಿಸಲು ಪ್ರೇರಣೆಯಾದರೆ, ಅದರಿಂದ ಕುಂಬಾರರ ಜೀವನಕ್ಕೂ ಬೆಳಕಾಗುತ್ತದೆ.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು

## ಗಟ್ಟಿಗಿತ್ತಿಯರನ್ನು ಅಳ್ಳೆದೆಯವರಂತೆ ವೃಥಾ ಬಿಂಬಿಸಬಾರದು

ಕಲರ್ಸ್ ಕನ್ನಡದ 'ಅಂತರಪಟ'ದಲ್ಲಿ ಆರಾಧನಾ (ಮುನಿಯಮ್ಮ) ಸಂಸ್ಥೆಯ ಪರವಾಗಿ ವಿಷಯ ಪ್ರಸ್ತುತಪಡಿಸುವ ಮುನ್ನ, ಅವರು ಮುಟ್ಟಾದುದನ್ನು ದೊಡ್ಡ ಸಮಸ್ಯೆ ಎನ್ನುವಂತೆ ತೋರಿಸಿದ್ದಾರೆ. ತೀರಾ ಖಾಸಗಿ ವಿಷಯವನ್ನು ಹೀಗೆ ಲಂಬಿಸುವ ಅಗತ್ಯವಿರಲಿಲ್ಲ. ಆರಾಧನಾಳಂತಹ ಗಟ್ಟಿಗಿತ್ತಿಗೆ ಮುಟ್ಟು ಮುಜುಗರವಾಗಿ ಪರಿಣಮಿಸುವುದನ್ನು ಊಹಿಸಿಕೊಳ್ಳಲೂ ಆಗದು.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## 'ಗೀತಾ' ಉಳಿಕೆ 'ಶಾಂತಂ ಪಾಪಂ'ನಲ್ಲಿ...

ಕಲರ್ಸ್ ಕನ್ನಡದ 'ಗೀತಾ' ಧಾರಾವಾಹಿಯ ಉಳಿದ ಭಾಗವನ್ನು 'ಶಾಂತಂ ಪಾಪಂ'ನಲ್ಲಿ ಮುದುವರೆಸಬಹುದು. ಈ ಮೂಲಕ ಧಾರಾವಾಹಿಯನ್ನು ಅಂತ್ಯ ಮಾಡುವುದಕ್ಕೆ ಗೊತ್ತಿಲ್ಲದೆ ಪರದಾಡುತ್ತಿರುವ ನಿರ್ದೇಶಕರಿಗೂ ನೋಡುಗರಿಗೂ ಒಳ್ಳೆಯದಾಗುತ್ತದೆ.

—ಆರ್. ಶ್ರೀನಿವಾಸ, ಬೆಂಗಳೂರು